ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.3085/2023

ಪಿ .ಡಬ್ಲ್ಯೂ :3

ಸಾಕ್ಷಿಯನ್ನು ದಿಃ 02-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಾನು ಸಿ ಎಸ್ ಪುರ ಹೋಬಳಿಯಲ್ಲಿ ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡಿಲ್ಲ . ಅವ್ವೇರಹಳ್ಳಿ ಗ್ರಾಮದಲ್ಲಿ ನರಸಿಂಹಸ್ವಾಮಿ ದೇವಸ್ಥಾನವಿದೆ ಎಂದರೆ ಸರಿ. ಸದರಿ ದೇವಸ್ಥಾನದ ಅರ್ಚಕರ ವಿಚಾರವಾಗಿ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಅಧಿಕಾರದ ಹಸ್ತಾಂತಕ್ಕೆ ಸಂಬಂಧಿಸಿ ಆದೇಶವಾಗಿತ್ತು ಎಂದರೆ ಸರಿ . 1 ನೇ ಆರೋಪಿತರು ಅರ್ಚಕ ವೃತ್ತಿಯ ಅಧಿಕಾರದ ಹಸ್ತಾಂತರದ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಜಿಲ್ಲಾಧಿಕಾರಿಗಳ ಆದೇಶದ ವಿರುದ್ದ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ . 1 ನೇ ಆರೋಪಿತರು ಮುಜರಾಯಿ ಇಲಾಖೆಯಿಂದ ನೀಡುವ ಸ್ವಸ್ಥಿಕ್ ಹಣವನ್ನು ನಮ್ಮ ಕಚೇರಿಯಿಂದ ಪಡೆಯುತ್ತಿದ್ದರು ಎಂದರೆ ಸರಿ . ಅರ್ಚಕರ ಅಧಿಕಾರದ ಹಸ್ತಾಂತರದ ವಿಚಾರಕ್ಕೆ ಸಂಬಂಧಿಸಿ ನಮ್ಮ ಶಿರಸ್ತೇದಾರರಾದ ಶ್ರೀರಂಗರವರನ್ನು ನೇಮಿಸಿದ್ದ ವಿಚಾರ ಗೊತ್ತು . ಯಾವ ದಿನಾಂಕದಂದು ಅವರನ್ನು ನೇಮಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ . 1 ನೇ ಆರೋಪಿತರಿಂದ ಮತ್ತೊಬ್ಬ ಅರ್ಚಕರಿಗೆ ಅಧಿಕಾರದ ಹಸ್ತಾಂತರ ಮಾಡಬೇಕಿತ್ತು . ನಾನು ಶಿರಸ್ತೇದಾರರಾದ ಶ್ರೀರಂಗರವರೊಡನೆ ಸ್ಥಳಕ್ಕೆ ಹೋಗಿರಲಿಲ್ಲ . ಅಧಿಕಾರ ಹಸ್ತಾಂತಕ್ಕೆ ಸಂಬಂಧಿಸಿ ತಾಲ್ಲೂಕು ಕಚೇರಿಯ ಶಿರಸ್ತೇದಾರರಾದ ಶ್ರೀರಂಗ ರವರು ಪೂಜಾ ಸಾಮಗ್ರಿಗಳನ್ನು ವಶಕ್ಕೆ ಪಡೆದು ಮಹಜರು ಮಾಡಿದ್ದರು , ಸದರಿ ಮಹಜರಿನ ಪ್ರತಿ ನೀಡಬೇಕೆಂದು 1 ನೇ ಆರೋಪಿತರು ಹಾಗೂ ಅವರ ಮಗ ಅಚ್ಯುತ್ ರವರು ತಾಲ್ಲೂಕು ಕಚೇರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ . ಯಾವುದೇ ಒಂದು ಧೃಡೀಕೃತ ನಕಲು ನೀಡಲು 7 ದಿನಗಳ ಕಾಲಾವಧಿ ತೆಗೆದುಕೊಳ್ಳುತ್ತೇವೆ . ಚುನಾವಣೆಯ ಸಮಯ ತುರ್ತಾಗಿ ಅರ್ಜಿಗಳನ್ನು ವಿಲೆ ಮಾಡುತ್ತೇವೆ ಉಳಿದ ಎಲ್ಲಾ ಸಮಯದಲ್ಲಿಯೂ 7 ದಿನಗಳ ಕಾಲಾವಧಿ ತೆಗೆದುಕೊಳ್ಳುತ್ತೇವೆ . ಸಾರ್ವಜನಿಕರಿಗೆ ಯಾವುದೇ ಕಾರಣಕ್ಕೆ ಸಂಬಂಧಿಸಿ ನೋಟಿಸ್ ನೀಡಿದರೆ ನೋಟಿಸ್‌ನಲ್ಲಿ ತಿಳಿಸಿರುವ ಕ್ರಮ ಕೈಗೊಳ್ಳಲು 7 ದಿನಗಳ ಕಾಲಾವಧಿ ನೀಡುತ್ತೇವೆ . ತಾಲ್ಲೂಕು ಕಚೇರಿಯಲ್ಲಿ ಶಿರಸ್ತೇದಾರರಿಗೆ ಪ್ರತ್ಯೇಕ ಕೊಠಡಿ ಇರುತ್ತದೆ ಎಂದರೆ ಸರಿ . ಯಾವುದೇ ಸಾರ್ವಜನಿಕರು ಶಿರಸ್ತೇದಾರರನ್ನು ಮಾತನಾಡಿಸಬೇಕಿದ್ದಲ್ಲಿ

ಅವರ ಕೊಠಡಿಗೆ ಹೋಗಿ ಮಾತನಾಡಿಸಿ ಬರುತ್ತಾರೆ ಎಂದರೆ ಸರಿ . ಯಾವುದೇ ಸಾರ್ವಜನಿಕರಿಗೆ ಸಂದರ್ಶನಕ್ಕೆ ಮಧ್ಯಾಹ್ನ 2.30 ರ ನಂತರ ಅವಕಾಶವಿರುತ್ತದೆ . ತುರ್ತು ವಿಚಾರವಿದ್ದಲ್ಲಿ ಯಾವಾಗಲಾದರೂ ಬರಬಹುದು . ಕಚೇರಿಗೆ ಬರುವ ಸಾರ್ವಜನಿಕರಲ್ಲಿ ಕೆಲವರ ಧ್ವನಿ ಗಡಸು ಧ್ವನಿಯಾಗಿರುತ್ತದೆ ಮತ್ತು ಕೆಲವರ ಧ್ವನಿ ಮೆಲುದನಿಯಾಗಿರುತ್ತದೆ ಎಂದರೆ ಸರಿ . ಮೇಲೆ ಹೇಳಿದ ದಿನಾಂಕದಂದು ಆರೋಪಿತರುಗಳು ನಮ್ಮ ಕಚೇರಿಗೆ ಬಂದಿಲ್ಲ ಮತ್ತು ನಾನು ಹೇಳುವಂತೆ ಜೋರು ಧ್ವನಿಯಲ್ಲಿ ಮಾತನಾಡಿಲ್ಲ ಎಂದರೆ ಸರಿಯಲ್ಲ . ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಆರೋಪಿತರುಗಳು ನಮ್ಮ ಕಚೇರಿಗೆ ಬಂದು ಮಹಜರಿನ ಪ್ರತಿ ನೀಡುವಂತೆ ವಾಗ್ವಾದ ಮಾಡಿ ಜೋರು ಧ್ವನಿಯಲ್ಲಿ ಮಾತನಾಡಿದ್ದಾರೆ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ . ಮೇಲೆ ಹೇಳಿದಂತೆ ಆರೋಪಿತರುಗಳು ನಮ್ಮ ಕಚೇರಿಯಲ್ಲಿ ಯಾವುದೇ ಗಲಾಟೆ ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಾನು ಹೇಳುವಂತೆ ಆರೋಪಿತರುಗಳು ನಮ್ಮ ಕರ್ತವ್ಯಕ್ಕೆ ಯಾವುದೇ ಅಡ್ಡಿಪಡಿಸಿಲ್ಲ ಎಂದರೆ ಸರಿಯಲ್ಲ . ನಾನು ಪೊಲೀಸರ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ . ಮೇಲೆ ಹೇಳಿದ ವಿಚಾರಗಳನ್ನೇ ನನ್ನ ಹೇಳಿಕೆಯಲ್ಲಿ ತಿಳಿಸಿದ್ದೇನೆ . ನಾನು ಹೇಳುವಂತೆ ಪೊಲೀಸರು ನನ್ನ ಸಮಕ್ಷಮ ಯಾವುದೇ ಸಿ ಡಿ ವಶಪಡಿಸಿಕೊಂಡಿಲ್ಲ , ನನ್ನ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . 1 ನೇ ಆರೋಪಿತರು ಮುಜರಾಯಿ ಇಲಾಖೆಯಿಂದ ನೇಮಕಗೊಂಡಿದ್ದು ಅಧಿಕಾರಿಗಳೊಡನೆ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಅವರಿಗೆ ತಿಳಿದಿದೆ ಎಂದರೆ ಆ ರೀತಿ ನಡೆದುಕೊಂಡಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ .

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.